

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಸುಸಂಸ್ಕೃತ ಮನೆತನದ ‘ಮದುಮಗಳು’

ಯಾರದಾದರೂ ಬುದ್ಧಿಯನ್ನು ಹಾಳುಮಾಡಬೇಕೆಂದಿದ್ದರೆ ಅವರನ್ನು ಯಾವುದಾದರೂ ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನಾಗಿ ಮಾಡುವುದು ಒಳ್ಳೆಯದು ಎಂದು ರಾಷ್ಟ್ರಕವಿ ಕುವೆಂಪುರವರು ಹೇಳುತ್ತಿದ್ದರಂತೆ. ಇದೇ ಮಾತನ್ನು ವಿಸ್ತರಿಸಿ ನಮ್ಮ ಸ್ವಾನುಭವದಲ್ಲಿ ಹೇಳುವುದಾದರೆ ಯಾರ ಬುದ್ಧಿಯನ್ನಾದರೂ ಹಾಳುಮಾಡಬೇಕೆಂದಿದ್ದರೆ ಅವರನ್ನು ಯಾವುದಾದರೂ ಮಠದ ಸ್ವಾಮಿಗಳನ್ನಾಗಿ ಮಾಡಿದರೆ ನಿಮ್ಮ ಇಷ್ಟಾರ್ಥ ಸಿದ್ಧಿಸುತ್ತದೆ. ಕಾವ್ಯರ್ಷಿ ಕುವೆಂಪುರವರು ಹೇಳಿದ ಮಾತಿಗೂ ನಮ್ಮ ಮಾತಿಗೂ ಮೂಲ ಆಶಯದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಕವಿಪುಂಗವರಾದ ಕುವೆಂಪುರವರು ಮೇಲಿನ ಮಾತನ್ನು ಆಡಿದ್ದು ಅವರು ಸ್ವತಃ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದಾಗ. ವಿಶ್ವವಿದ್ಯಾನಿಲಯದ ಆಡಳಿತನಿರ್ವಹಣೆ ಅವರ ಕಾವ್ಯರಚನೆಗೆ ಅಡ್ಡಿಯುಂಟುಮಾಡಿದ ಕಹಿ ಅನುಭವದ ಹಿನ್ನೆಲೆಯಲ್ಲಿ ಅವರು ಈ ಮಾತನ್ನು ಆಡಿರಬೇಕೆಂದು ತೋರುತ್ತದೆ. ಕುವೆಂಪುಸಾಹಿತ್ಯ ಸಂಶೋಧಕರು ಈ ನಿಟ್ಟಿನಲ್ಲಿ ಒಂದು ವಿಶೇಷ ಅಧ್ಯಯನವನ್ನು ಮಾಡಿದರೆ ಕುವೆಂಪು ಅವರ ಮೇಲಿನ ಮಾತಿನ ಆಶಯವನ್ನು ಮನಗಾಣಬಹುದಾಗಿದೆ.

ಮಠದ ಸ್ವಾಮಿಗಳಾದ ಮೇಲೆ ಸಾಹಿತ್ಯ ವಿಷಯಕವಾದ ನಮ್ಮ ಅನುಭವ ಕುವೆಂಪು ಅವರ ಅನುಭವಕ್ಕಿಂತ ಭಿನ್ನವಾಗಿಯೇನೂ ಇಲ್ಲ. ದೇಶ-ವಿದೇಶಗಳ ವಿಭಿನ್ನ ವಿಶ್ವವಿದ್ಯಾನಿಲಯಗಳಲ್ಲಿ ಓದಿ ಬಂದ ನಮಗೆ ಬಸವಣ್ಣನವರು ಹೇಳುವಂತೆ “ಬೆರಣೆಯನಾಯಲಲ್ಲದೆ ಅಟ್ಟುಣ್ಣ ತೆರಹಿಲ್ಲವೆನಗೆ” (ಬೆಳಗಿನಿಂದ ಸಂಜೆಯವರೆಗೆ ಬೆರಣೆಯನ್ನು ಅಂದರೆ ಕುರುಳನ್ನು ಆಯುತ್ತಾ ಕುಳಿತು ಒಲೆ ಹಚ್ಚಿ ಅಡುಗೆ ಮಾಡಿ ಉಣ್ಣಲು ಕಾಲಾವಕಾಶವಿಲ್ಲ) ಎಂಬ ವಿಷಾದಕರ ಸ್ಥಿತಿಯಂಟಾಗಿದೆ. ಸಂಸ್ಕೃತವಾಙ್ಮಯದಲ್ಲಿ ಅಪಾರ ಪಾಂಡಿತ್ಯ ಹೊಂದಿದ ವಯೋವೃದ್ಧರೂ, ಜ್ಞಾನವೃದ್ಧರೂ ಆದ ಪ್ರೊ. ಕೆ.ಟಿ ಪಾಂಡುರಂಗಿ ಅವರು ತಮ್ಮ ಒಂದು ಪುಸ್ತಕದ ಕರಡು ಪ್ರತಿಯನ್ನು ನಮಗೆ ಕಳುಹಿಸಿ ಕೆಲವು ತಿಂಗಳುಗಳೇ ಆದವು. ಅದಕ್ಕೆ ಒಂದು ಮುನ್ನುಡಿಯನ್ನು ನಮ್ಮಿಂದ ಬರೆಸಬೇಕೆಂಬುದು ಅವರ ಹಂಬಲ. ಅವರು ನಮ್ಮ ಮೇಲಿಟ್ಟಿರುವ ಅಭಿಮಾನದ ಕಾರಣದಿಂದ ಕಾರ್ಯಬಾಹುಲ್ಯದಲ್ಲಿ ಕಷ್ಟವಾದರೂ ಬರೆಯಲು ಒಪ್ಪಿಗೆ ಸೂಚಿಸಿದ್ದೆವು. ಮಠ ಮತ್ತು ಸಮಾಜದ ಕಾರ್ಯನಿರ್ವಹಣೆಯಲ್ಲಿ ನಾವು ಕಟ್ಟಿಕೊಂಡ ಅಥವಾ ನಮಗೆ ಹುತ್ತದಂತೆ ಸುತ್ತಿಕೊಂಡ ಹಲವಾರು ಜವಾಬ್ದಾರಿಗಳ ಮಧ್ಯೆ ವಿಜಯಕರ್ನಾಟಕದ ನಮ್ಮ ಈ ‘ಬಿಸಿಲು ಬೆಳದಿಂಗಳು’ ಅಂಕಣಕ್ಕೆ ವಾರಕ್ಕೊಮ್ಮೆ ಬರೆಯುವುದೇ ದೊಡ್ಡ ಸವಾಲಾಗಿದೆ. ಕಾರ್ಯಗೌರವದ ಕಾರಣ ಇನ್ನು ಮುಂದೆ ನಮ್ಮ ಈ ಅಂಕಣ ಬರಹವನ್ನು ನಿಲ್ಲಿಸಬೇಕೆಂಬ ಆಲೋಚನೆ ಮನಸ್ಸಿನಲ್ಲಿ ಸುಳಿದಾಡಿದಾಗಲೆಲ್ಲಾ ಸಹೃದಯ ಓದುಗರಿಂದ ಏನಾದರೊಂದು ಮಿಂಚೋಲೆ (e-mail) ಬಂದಿರುತ್ತದೆ. “The day you stop writing these articles. I would stage a protest in front of your Math in Sirigere” ಎಂದು ಎಚ್.ಎಸ್ ಸಿದ್ದೇಶ್ ಎಂಬ ಯುವ ಓದುಗರೊಬ್ಬರು ನಮ್ಮ ಅಂಕಣ ಬರಹವನ್ನು ನಿಲ್ಲಿಸಿದರೆ ಮಠದ ಮುಂದೆ ಧರಣಿ ಮಾಡುವುದಾಗಿ ಮೊನ್ನೆ ತಾನೆ ‘ಧಮಕಿ’ ಬೇರೆ ಹಾಕಿದ್ದಾರೆ. ಹೀಗಿರುವಾಗ ಪ್ರೊ. ಪಾಂಡುರಂಗಿಯವರ ಪುಸ್ತಕಕ್ಕೆ ಮುನ್ನುಡಿ ಬರೆಯುವ ಹೆಚ್ಚುವರಿ ಕೆಲಸವನ್ನು ಸಕಾಲದಲ್ಲಿ ನಿರ್ವಹಿಸಲು ಆಗಲಿಲ್ಲ. ಮುನ್ನುಡಿ ಬರೆಯುವುದಿರಲಿ, ಅವರು ಕಳುಹಿಸಿಕೊಟ್ಟಿದ್ದ ಹಸ್ತಪ್ರತಿಯನ್ನು ಪ್ರಯಾಣಕಾಲದಲ್ಲಿ ಓದಲೆಂದು ಪಕ್ಕದಲ್ಲಿಯೇ ಇಟ್ಟುಕೊಂಡಿದ್ದರೂ ಹಳ್ಳಿಗಳ ತಗ್ಗುತಿಟ್ಟು ರಸ್ತೆಗಳಲ್ಲಿ ಕಾರಿನ ‘ಮುಷ್ಕರ’ದಿಂದಾಗಿ ಒಂದು ಪುಟವನ್ನೂ ತೆರೆದು ನೋಡಲಾಗಲಿಲ್ಲ.

ಲೇಖಕರಿಗೋ ಇಷ್ಟು ದೀರ್ಘ ಕಾಲವಾದರೂ ಮುನ್ನುಡಿ ಬರಲಿಲ್ಲವಲ್ಲಾ ಎಂಬ ನಿರಾಸೆ; ನಮಗೋ ಎಷ್ಟೇ ಪ್ರಯತ್ನ ಮಾಡಿದರೂ ಬರೆಯಲು ಕಾಲಾವಕಾಶವಾಗುತ್ತಿಲ್ಲವಲ್ಲಾ ಎಂಬ ನೋವು. ಕಾಲ ಮಾತ್ರ ನಿರ್ದಯಿ, ನಮ್ಮ ಅಸಹಾಯಕತೆಯನ್ನು ಹಂಗಿಸುತ್ತಾ ಮುಂದೆ ಸರಿದು ಹೋಗುತ್ತಲೇ ಇದೆ, ಇರಲಿ.

ಯಾವುದೇ ಕೃತಿಯ ಮೊದಲ ಓದುಗ ಮುನ್ನುಡಿಕಾರ, ಎರಡನೆಯ ಓದುಗ ವಿಮರ್ಶಕ. ವಿಮರ್ಶಕನ ಆಯ್ಕೆ ಲೇಖಕನಿಗೆ ಇರುವುದಿಲ್ಲ. ಆದರೆ ಮುನ್ನುಡಿಕಾರನನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಲೇಖಕನಿಗೆ ಇರುತ್ತದೆ. ಲೇಖಕನ ಕೃತಿಯನ್ನು ಓದುಗರಿಗೆ ಪರಿಚಯಿಸಿ ಅವರಿಬ್ಬರನ್ನೂ ಮುಖಾಮುಖಿಯಾಗಿಸಿ ಪಕ್ಕಕ್ಕೆ ಸರಿಯುವ ಕೆಲಸ ಮುನ್ನುಡಿಕಾರನದು. ಗೃಹಪ್ರವೇಶ ಮಾಡುವ ನವವಧುವಿನ ಹಣೆಗೆ ಕುಂಕುಮದ ತಿಲಕವಿಟ್ಟು ಆರತಿ ಎತ್ತಿ ಮನೆದುಂಬಿಸಿಕೊಳ್ಳುವ ಹಿರಿಯ ಮುತ್ತೈದೆಯ ಕೆಲಸ ಮಾತ್ರ ಮುನ್ನುಡಿಕಾರನದು! ಮನೆಗೆ ಬರುವ ಮದುಮಗಳು ಗೃಹಲಕ್ಷ್ಮಿಯಲ್ಲವೆ! ಅವಳನ್ನು ‘ಭಾಗ್ಯದ ಲಕ್ಷ್ಮೀ ಬಾರಮ್ಮಾ’ ಎಂದು ಹಾರೈಸಿ ಒಳಗೆ ಕರೆದುಕೊಳ್ಳಬೇಕಲ್ಲವೆ! ‘ಅವಳ ಮೂಗು ಸ್ವಲ್ಪ ದೊಡ್ಡದು, ಅವಳ ಮುಖ ಕಪ್ಪು’ ಎಂದು ಜರಿಯಬಹುದೇ? ಅದೇನಿದ್ದರೂ ನಂತರಂತೆ ಆಡಿಕೊಳ್ಳುವ ವಿಮರ್ಶಕರಿಗೆ ಬಿಟ್ಟ ವಿಚಾರ! ಆದರೂ ಕೆಲ ಮುನ್ನುಡಿಕಾರರು ವಿಮರ್ಶೆಯನ್ನು ಮಿತವಾಗಿ ಮಾಡುವುದೂ ಉಂಟು, ಆ ಮಾತು ಬೇರೆ.

ಕನ್ನಡ ಸಾರಸ್ವತಲೋಕಕ್ಕೆ ಪಾದಾರ್ಪಣ ಮಾಡುತ್ತಿರುವ ಸುಸಂಸ್ಕೃತ ಮನೆತನದ ಮದುಮಗಳೆಂದರೆ ಪ್ರೊ. ಕೆ.ಟಿ ಪಾಂಡುರಂಗಿಯವರ ಕೃತಿ “ವಿಚಾರಜ್ಯೋತಿ”; ಸಂಸ್ಕೃತ ಸುಭಾಷಿತಗಳ ಸೌಂದರ್ಯದಿಂದ ಕಂಗೊಳಿಸುವ, ವಚನಸಾಹಿತ್ಯ, ದಾಸಸಾಹಿತ್ಯ ಮತ್ತು ಆಂಗ್ಲಸಾಹಿತ್ಯದಲ್ಲಿರುವ ಅಪರೂಪದ ಅನುಭವಾಮೃತದ ನುಡಿಗಳ ಆಭರಣಗಳಿಂದ ಸಿಂಗಾರಗೊಂಡ

ಸುಕೋಮಲ ಸಾಹಿತ್ಯಕುವರಿ. ಬೆಂಗಳೂರಿನ ದ್ವೈತವೇದಾಂತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯಿಂದ ಪ್ರಕಟಗೊಳ್ಳುತ್ತಿರುವ ಸುಮಾರು 750 ಪುಟಗಳ ಈ ಉದ್‌ಗ್ರಂಥ ಪ್ರೊ. ಪಾಂಡುರಂಗಿಯವರು ಮೂವತ್ತು ವರ್ಷಗಳ ಹಿಂದೆ 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ 1982 ರ ಗಾಂಧಿ ಜಯಂತಿಯಿಂದ ಸತತವಾಗಿ ಮೂರು ವರ್ಷಗಳ ಕಾಲ ನಿತ್ಯವೂ 'ವಿಚಾರಜ್ಯೋತಿ' ಎಂಬ ಶೀರ್ಷಿಕೆಯಡಿಯಲ್ಲಿ ಒಂದೊಂದು ಸಂಸ್ಕೃತ ಸುಭಾಷಿತದ ಮೇಲೆ ಬರೆದ ಕನ್ನಡ ವ್ಯಾಖ್ಯಾನವುಳ್ಳ ಆಯ್ದ ಬರಹಗಳ ಸಂಗ್ರಹ. ಸಂಸ್ಕೃತ ಸುಭಾಷಿತಗಳನ್ನು ಯಥಾವತ್ತಾಗಿ ಉದ್ಧರಿಸಿ, ಅವುಗಳ ಆಶಯವನ್ನು ಕನ್ನಡದಲ್ಲಿ ಸರಳವಾಗಿ ವ್ಯಾಖ್ಯಾನಿಸಿ, ಒಳ್ಳೆಯ ಮಾತುಗಳನ್ನು ವಿಸ್ತರಿಸಿ, ಅವುಗಳಿಗೆ ಪೂರಕವಾದ ಹೊಸ ವಿಚಾರಗಳನ್ನು ಮಂಡಿಸುವ ವಿನೂತನ ವಿಚಾರಧಾರೆ ಈ ಲೇಖನಗಳಲ್ಲಿದೆ. ಕೆಲವೊಮ್ಮೆ ಸಮಕಾಲೀನ ಸಂದರ್ಭಗಳಲ್ಲಿ ಸುಭಾಷಿತಗಳ ಆಶಯವನ್ನು ಪರಿಮಾರ್ಜನಗೊಳಿಸುವ ಹೊಸದೃಷ್ಟಿಯೂ ಇಲ್ಲಿದೆ. ಉದಾಹರಣೆಗೆ ಒಂದು ಸಂಸ್ಕೃತ ಸುಭಾಷಿತವು ಮನುಷ್ಯನಿಗಿರುವ ನೂರಾರು ಚಿಂತೆಗಳಲ್ಲಿ 'ಪ್ರೀತಿಯಿಲ್ಲದ ಹೆಂಡತಿಯೂ ಚಿಂತೆಗೆ ಕಾರಣ' ಎಂದು ಹೇಳುತ್ತದೆ. ಇದನ್ನು ಯಥಾವತ್ತಾಗಿ ವಿವರಿಸಿರುವ ಲೇಖಕರು ಮುಂದುವರಿದು ಇಂದಿನ ಕಾಲದಲ್ಲಿ ಪ್ರೀತಿಯಿಲ್ಲದ ಹೆಂಡತಿ ಇದ್ದರೂ ಪರವಾಗಿಲ್ಲ, ಗಂಡನಿಗೇ 'ದಬಾಯಿಸುವ ಹೆಂಡತಿ ಇಲ್ಲದಿದ್ದರೆ ಸಾಕು', 'ವರದಕ್ಷಿಣೆ ಹಿಂಸೆ ಕೇಸು ಹಾಕದಿರುವ ಹೆಂಡತಿ ಇದ್ದರೆ ಒಳ್ಳೆಯದು' ಎಂಬ ಹೊಸ ಅರ್ಥವನ್ನು ನೀಡುತ್ತಾರೆ.



"ಕೆರೆ ಹಳ್ಳ ಬಾವಿಗಳು ಮೈದೆಗೆದರೆ ಗೊಳ್ಳೆ ಗೊರಚೆ ಚಿಪ್ಪು ಕಾಣಬಹುದು, ವಾರಿಧಿ ಮೈದೆಗೆದರೆ ಮುತ್ತುರತ್ನಂಗಳ ಕಾಣಬಹುದು, ಕೂಡಲಸಂಗನ ಶರಣರು ಮನದೆರೆದು ಮಾತನಾಡಿದರೆ ಲಿಂಗವ ಕಾಣಬಹುದು" ಎಂಬ ಬಸವಣ್ಣನವರ ವಚನವನ್ನು ಉಲ್ಲೇಖಿಸಿರುವ ಲೇಖಕರು ಮುಂದುವರಿದು ಹೇಳುವ ಮಾತು ತುಂಬಾ ಮನನೀಯವಾಗಿದೆ: "ಶಿವಶರಣರಂಥ ಮಹಾತ್ಮರ ವಿಷಯದಲ್ಲಿ ಈ ಹೋಲಿಕೆ ಮತ್ತು ಅವುಗಳ ಈ ವಿವರಣೆಗಳು ಸಾರ್ಥಕವಾಗಿವೆ. ಆದರೆ ಸಮುದ್ರದಂತೆ ಕೇವಲ ಮೇಲುನೋಟಕ್ಕೆ ದೊಡ್ಡವರಾದವರೆಲ್ಲ ದೊಡ್ಡವರು, ಗುಣವಂತರು ಎಂದು ಹೇಳಲು ಬರುವುದಿಲ್ಲ. ರತ್ನಗಳು ದೊರೆಯುವ ಇದೇ ಸಮುದ್ರದಲ್ಲಿ ಮೊಸಳೆಗಳೂ ಇರುವವು. ಸಮುದ್ರದ ನೀರೆಲ್ಲ ಉಪ್ಪಾಗಿದ್ದು ಒಂದು ಬೊಗಸೆ ನೀರನ್ನೂ ಅದರಿಂದ ಕುಡಿಯಲು ಬರುವದಿಲ್ಲ. ಕೆರೆ ಬಾವಿಗಳ ನೀರು ಅವು ಚಿಕ್ಕವಾಗಿದ್ದರೂ ಸಿಹಿಯಾಗಿರುತ್ತವೆ. ಆದ್ದರಿಂದ ಚಿಕ್ಕತನ ಅಥವಾ ದೊಡ್ಡತನವನ್ನು ಕೇವಲ ಆಕಾರದಿಂದ ನಿರ್ಣಯಿಸಲು ಬರುವದಿಲ್ಲ, ಗುಣದಿಂದ ನಿರ್ಣಯಿಸಬೇಕಾಗುವದು".

ಇನ್ನೊಂದು ಸುಭಾಷಿತವು 'ನಿದ್ರಾಸ್ಥಾನಾನಿ ತು ತ್ರೀಣಿ ಪುರಾಣಂ ಪುಸ್ತಕಂ ಜಪಂ' ಅಂದರೆ ಪುರಾಣ ಕೇಳುವುದು, ಪುಸ್ತಕ ಓದುವುದು, ಜಪ ಮಾಡುವುದು ಇವು ನಿದ್ರೆ ಬರಿಸುವ ಮೂರು ತಾಣಗಳು ಎಂದು ಹೇಳುತ್ತದೆ. ಇದನ್ನು ಲೇಖಕರು ವಿಮರ್ಶೆ ಮಾಡುತ್ತಾ 'ಇಂದು ಪುರಾಣ ಹೇಳುವವರೂ ಕೇಳುವವರೂ ಇಲ್ಲ, ಓದುವವರೂ ಇಲ್ಲ, ಹಣದ ಜಪವೇ ಜಪ, ಆದಕಾರಣ ಸರಕಾರೀ ಆಫೀಸುಗಳಲ್ಲಿ ನೌಕರಿ ಹಿಡಿಯುವುದೂ ನಿದ್ರೆಗೆ ಉತ್ತಮ ಸಾಧನ' ಎಂದು ಹೊಸ ತಾಣವೊಂದನ್ನು ಸೇರ್ಪಡೆ ಮಾಡಿದ್ದಾರೆ. ಯಾವುದೋ ಕಾಲದಲ್ಲಿ ಯಾವುದೋ ವಿಷಯವನ್ನು ಕುರಿತು ಹಿಂದಿನ ಅನುಭವಿಗಳು ಹೇಳಿದ ಸುಭಾಷಿತವನ್ನು ಸಮಕಾಲೀನ ಸಮಾಜದ ನಡವಳಿಕೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ವಿಶಿಷ್ಟ ಶೈಲಿ ಇಲ್ಲಿದೆ. ಸಂಸ್ಕೃತದ ಸುಭಾಷಿತಗಳಷ್ಟೇ ಅಲ್ಲ, ಬಸವಣ್ಣ, ಅಕ್ಕಮಹಾದೇವಿ ಮೊದಲಾದ ಶರಣರ ಅನುಭಾವದ ವಚನಗಳು, ಪುರಂದರದಾಸರ ಪದಗಳೂ, ಇಂಗ್ಲೀಷ್ ಲೇಖಕರ ಅನುಭವದ ಮಾತುಗಳೂ ಇಲ್ಲಿವೆ. ಲೇಖಕರ ಸ್ವಾನುಭವದ ಮಾತುಗಳೂ ಇಲ್ಲಿವೆ. ಉದಾಹರಣೆಗೆ:

- ನರ್ಸಿಂಗ್ ಹೋಂನಲ್ಲಿಯೇ ಹುಟ್ಟಿ ನರ್ಸಿಂಗ್ ಹೋಂನಲ್ಲಿಯೇ ಸಾಯುವ ಕಾಲ ಈಗ ಬಂದಿದೆ. ಇವುಗಳಿಗೆ ಜನನ-ಮರಣ ಭವನಗಳೆಂದು ಹೆಸರಿಡುವುದು ಹೆಚ್ಚು ಸೂಕ್ತ.
- ನಾಗರೀಕತೆಯು ಹೆಚ್ಚಾದಂತೆ ಮಾನವೀಯತೆಯು ಕಡಿಮೆಯಾಗುತ್ತಿದೆ.
- ನೀನು ಟೆನ್ಶನ್ ಮಾಡಿಕೊಳ್ಳುತ್ತೀಯಾ ಎಂದು ಮತ್ತೆ ಮತ್ತೆ ಹೇಳಿ ಟೆನ್ಶನ್ ಇಲ್ಲದವರಿಗೂ ಟೆನ್ಶನ್ ಉಂಟುಮಾಡುವುದು ಇಂದಿನ ವಿಧಾನವಾಗಿದೆ.

ಅಪಾರವಾದ ಲೋಕಜ್ಞಾನ, ಜೀವನಾನುಭವ ಇಲ್ಲಿ ಕಂಡುಬರುತ್ತವೆ. ಲೇಖಕರ ಸ್ವಾನುಭವದ ಇಂತಹ ಮಾತುಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಕೊಟ್ಟರೆ ಮತ್ತೊಂದು ಅಪರೂಪದ ಆಧುನಿಕ ಸುಭಾಷಿತ ಗ್ರಂಥ ಆಗುವುದರಲ್ಲಿ ಸಂದೇಹವಿಲ್ಲ.

5.1.2012

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑